ಕರ್ನಾಟಕ ವಿಧಾನ ಸಭೆ

ಶುಕ್ರವಾರ 26ನೇ ಜುಲೈ 1985

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್ ರವರು) ಪೀಠವನ್ನು ಅಲಂಕರಿಸಿದ್ದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ.—ಹರಿಜನ-ಗಿರಿಜನರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರೋ ಜಮೀನನ್ನು ಖಾಯಂ ಆಗಿ ಮಂಜೂರು ಮಾಡುವ ಬಗ್ಗೆ.

ಪ್ರ. ಸಂಖ್ಯೆ 74 (6) ಎಂ. ಪಿ. ಕೇಶವಮೂರ್ತಿ (ಅನೇಕಲ್ಲು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ;

ಅ) ಬೆಂಗಳೂರು ಜಿಲ್ಲೆ ಅನೇಕಲ್ ತಾಲ್ಲೂಕಿನ ಕೆಲವು ಪ್ರದೇಶಗಳನ್ನು ''ಹಸಿರು ವಲಯ'' ಎಂದು ಘೋಷಣೆ ಮಾಡಿರುವುದರಿಂದ ಅನೇಕ ವರ್ಷಗಳಿಂದ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಪರಿಶಿಷ್ಟ ಜನಾಂಗದವರಿಗೆ ತೊಂದರೆಯಾಗಿರುವುದು ನಿಜವೆ ;

ಆ) ಹಾಗಿದ್ದಲ್ಲಿ, ಬಡ ಭೂ ರಹಿತ ಹರಿಜನರಿಗೆ ಜಮೀನು ಮಂಜೂರು ಮಾಡಲು ಬೇರೆ ಏನಾದರೂ ಕ್ರಮ ಕೈಗೊಳ್ಳಲಾಗುವುದೆ ಅಥವಾ ''ಹಸಿರು ವಲಯ'' ಎಂಬ ವ್ಯಾಪ್ತಿಯಿಂದ ವಿನಾಯಿತಿ ನೀಡಿ ಇವರಿಗೆಲ್ಲಾ ಜಮೀನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೆ ;

ಇ) ''ಹಸಿರು ವಲಯ'' ಎಂಬ ಘೋಷಣೆ ಮಾಡಿದಾಗಿನಿಂದಲೂ ಈ ತಾಲ್ಲೂಕಿನಲ್ಲಿ ಹರಿಜನ—ಗಿರಿಜನರಿಗೆ ಜಮೀನು ಮಂಜೂರಾಗದಿರುವ ಹಾಗೂ ತಿರಸ್ಕೃತವಾಗಿರುವ ಪ್ರಕರಣಗಳೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ''ಹಸಿರು ವಲಯ'' ಎಂದು ಘೋಷಿಸಿದ ಪ್ರದೇಶದಲ್ಲಿ ಕಾಯಿದೆ ಅನ್ವಯ ಪ್ರಕರಣಗಳನ್ನು ಪರಿಶೀಲಿಸಲಾಗುತ್ತಿದೆ.

ಆ) ಉದ್ದೇಷಿತ ''ಹಸಿರು ವಲಯ'' ಎಲ್ಲಿ ಅನಧಿಕೃತವಾಗಿ ಸರ್ಕಾರಿ ಜಮೀನನ್ನು ಸಾಗುವಳಿ ಮಾಡುತ್ತಿರುವ ಹರಿಜನ-ಗಿರಿಜನರಿಗೆ ''ಹಸಿರು ವಲಯ'' ದ ಹೊರಭಾಗದಲ್ಲಿ ಸರ್ಕಾರಿ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ಪ್ರಕಾರ ಮಂಜೂರು ಮಾಡಲು ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ ಅವರಿಗೆ ಆದೇಶ ನೀಡಲಾಗಿದೆ.

ಆದ್ದರಿಂದ ''ಹಸಿರು ವಲಯ'' ದಲ್ಲಿರುವ ಅನಧಿಕೃತ ಸಾಗುವಳಿಗೆ ವಿನಾಯಿತಿ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಬೆಂಗಳೂರು ನಗರ ಸುತ್ತಮುತ್ತಲು ''ಹಸಿರು ವಲಯ''ವನ್ನು ನಿರ್ಮಿಸಲು ನಿರ್ಧಾರ ತೆಗೆದುಕೊಂಡಂದಿನಿಂದ "ಹಸಿರು ವಲಯ" ದಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಅನೇಕಲ್ ತಾಲ್ಲೂಕಿನ 5 ಹಳ್ಳಿಗಳಲ್ಲಿ 109 ಹರಿಜನ-ಗಿರಿಜನರ 5 ಪ್ರಕರಣಗಳು ಬಾಕಿ ಇರುತ್ತವೆ. ತಿರಸ್ಕರಿಸಲ್ಪಟ್ಟ ಪ್ರಕರಣಗಳು ಸದ್ಯಕ್ಕೆ ಯಾವುವೂ ಇರುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ದಲಿತ ಸಂಘರ್ಷ ಸಮಿತಿಯವರು ನನ್ನ ಮತ್ತು ಮುಖ್ಯಮಂತ್ರಿಗಳ ಜೊತೆಗೆ ಈ ವಿಚಾರದಲ್ಲಿ ಚರ್ಚೆ ಮಾಡಿದರು. ಅವರು ಚರ್ಚೆ

ಮಾಡಿದ ಮೇಲೆ ಈ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತಿದೆ. ಹಸಿರು ವಲಯದಲ್ಲಿರತಕ್ಕಂಥ ಈ ಜಮೀನುಗಳನ್ನು ಸಾಗುವಳಿ ಮಾಡತಕ್ಕಂಥ ಹರಿಜನ ಗಿರಿಜನರಿಗೇ ಕೊಡಬೇಕು ಎನ್ನುವ ಇಚ್ಛೆ ಸರ್ಕಾರಕ್ಕಿದೆ. ಹಸಿರು ವಲಯದಲ್ಲಿ ಕೃಷಿ ಮಾಡಿದರೆ ಆದಕ್ಕೆ ಧಕ್ಕೆ ಬರುವುದಿಲ್ಲ ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಬಂದಿದೆ. ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳುವ ಭರವಸೆ ಕೊಡುತ್ತೇನೆ

ಶ್ರೀ ಎಂ. ಪಿ. ಕೇಶಮೂರ್ತಿ.—ಭರವಸೆ ಎಷ್ಟು ದಿವಸಗಳಲ್ಲಿ ಆಗಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟು ಬೇಗ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆ.

ವಿಷಯ.—ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ

ಪ್ರ. ಸಂಖ್ಯೆ 76 (51) ಶ್ರೀ ಜೆ. ರಾಜೇಗೌಡ (ಹನೂರು) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ವಿದ್ಯುತ್ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ;

ಅ) ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಉತ್ಪಾದನಾ ಚಟುವಟಿಕೆಗೆ ಒಂದು ವರ್ಷಕ್ಕೆ ಬೇಕಾಗುವ ವಿದ್ಯುಚ್ಛಕ್ತಿಯ ಪ್ರಮಾಣವೆಷ್ಟು ;

ಆ) ಪ್ರಸ್ತುತ ದೊರೆಯುತ್ತಿರುವ ವಿದ್ಯುಚ್ಛಕ್ತಿ ಪ್ರಮಾಣವೆಷ್ಟು ;

ಇ) ಸಾಕಷ್ಟು ಪ್ರಮಾಣದ ವಿದ್ಯುಚ್ಛಕ್ತಿ ದೊರೆಯದಿರುವುದರಿಂದ ಉತ್ಪಾದನಾ ಚಟುವಟಿಕೆಗಳು ವರ್ಷದಲ್ಲಿ ಎಷ್ಟು ದಿನ ಸ್ಥಗಿತಗೊಳ್ಳುತ್ತದೆ ?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್ ಮತ್ತು ಭೂಗರ್ಭ ಮಂತ್ರಿಗಳು).—

ಅ) ವರ್ಷ ಒಂದಕ್ಕೆ ಬೇಕಾಗುವ ವಿದ್ಯುತ್ ಪ್ರಮಾಣ 480ರಿಂದ 520 ಮಿಲಿಯನ್ ಯೂನಿಟ್ಟುಗಳು.

ಆ) ಜುಲೈ 1984ರಿಂದ ಜೂನ್ 85ರವರೆಗೆ ಈ ಕಾರ್ಖಾನೆಗೆ ನಿಗದಿ ಮಾಡಿದ ವಿದ್ಯುತ್ ಪ್ರಮಾಣ 362.00 ದಶ ಲಕ್ಷ ಯೂನಿಟ್ಟುಗಳು. ಆದರಲ್ಲಿ ಕಾರ್ಖಾನೆ ಈ ಅವಧಿಯಲ್ಲಿ ಬಳಕೆ ಮಾಡಿದ ವಿದ್ಯುತ್ತಿನ ಪ್ರಮಾಣ 300 ದಶ ಲಕ್ಷ ಯೂನಿಟ್ಟುಗಳು.

ಇ) 1984–85ರಲ್ಲಿ ಈ ಕಾರ್ಖಾನೆಯಲ್ಲಿ ಲೇ ಆಫ್ ಆಗಿಲ್ಲ.

ಶ್ರೀ ಬಿ. ರಾಜೂಗೌಡ.—ಸ್ವಾಮಿ, 480 ರಿಂದ 520 ಮಿಲಿಯನ್ ಯೂನಿಟ್‌ಗಳು ಬೇಕಾಗಿದ್ದರೂ ಯಾವ ಆಧಾರದ ಮೇಲೆ 362 ದಶಲಕ್ಷ ಯೂನಿಟ್‌ಗಳು ಎಂದು ಗೊತ್ತು ಮಾಡಿದಿರಿ ?

ಶ್ರೀ ಜೆ. ಎಸ್. ದೇಶ್‌ಮುಖ್.—ಈ ಕಾರ್ಖಾನೆಯ ವರ್ಷದ ಅತಿ ಹೆಚ್ಚಿನ ಬೇಡಿಕೆ 795 ದಶ ಲಕ್ಷ ಯೂನಿಟ್ಟುಗಳನ್ನು ಮತ್ತು ಮಾಹೆಯಾನ ಗರಿಷ್ಟ ಬೇಡಿಕೆ 66.25 ದಶ ಲಕ್ಷ ಯೂನಿಟ್ಟುಗಳನ್ನು ಆಧಾರವಾಗಿಟ್ಟುಕೊಂಡು ಗಣಕ ಮಾಡಲಾಗಿದೆ. ಆದರೆ ವರ್ಷದಲ್ಲಿ ಇತರ ತಿಂಗಳುಗಳಲ್ಲಿ ಬೇಡಿಕೆ 66.25 ದಶ ಯೂನಿಟ್ಟುಗಳಿಗೂ ಕಡಿಮೆ ಇರಬಹುದಾದ್ದರಿಂದ ವರ್ಷದ ಬೇಡಿಕೆ 795 ದಶ ಯೂನಿಟ್ಟುಗಳಿಗೂ ಕಡಿಮೆ ಇರಬಹುದು. ಈ ಕಾರ್ಖಾನೆಯ ಅಧಿಕಾರ ವರ್ಗದವರ ಅಂದಾಜಿನ ಪ್ರಕಾರ ವರ್ಷ ಒಂದಕ್ಕೆ ಬೇಕಾಗುವ ವಿದ್ಯುತ್ ಪ್ರಮಾಣ 480 ರಿಂದ 520 ಮಿಲಿಯನ್ ಯೂನಿಟ್ಟುಗಳು.

ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ವಿದ್ಯುತ್ತಿನ ಕಾಂಟ್ರಾಕ್ಟ್ ಡಿಮ್ಯಾಂಡ್ : 1,32,500 ಕೆ.ವಿ.ಎ.

ಅತಿ ಹೆಚ್ಚಿನ ರೆಕಾರ್ಡ್ ಆದ ಪವರ್ ಡಿಮ್ಯಾಂಡ್ ; 1,26,933 ಕೆ.ವಿ.ಎ.

ರಾಜ್ಯದಲ್ಲಿ ತಲೆದೋರುವ ವಿದ್ಯುತ್ ಕೊರತೆಯಿಂದಾಗಿ ಹೈಟೆನ್‌ಷನ್ ವಿದ್ಯುತ್ ಬಳಕೆದಾರರ ಮೇಲೆ ವಿಧಿಸಿರುವ ಕಡಿತವನ್ನು ಈ ಕಾರ್ಖಾನೆಗೂ ಅನ್ವಯಿಸಲಾಗುತ್ತದೆ.

	ಡಿಮ್ಯಾಂಡ್ ಕಡಿತ	ಎನರ್ಜಿ ಕಡಿತ
ಜುಲೈ 1984ರಿಂದ 14–9–84ರ ವರೆಗೆ	ಶೇ. 30	ಶೇ. 30
15–9–84 ರಿಂದ 31–3–85ರವರೆಗೆ	ಶೇ 40	ಶೇ. 60
ಏಪ್ರಿಲ್ 85ರಿಂದ 14-7-85ರವರೆಗೆ	ಶೇ 40	ಶೇ. 80
15–7–85ರಿಂದ	ಶೇ. 20	ಶೇ. 60

ಶ್ರೀ ಬಿ. ರಾಜೂಗೌಡ.—ನನ್ನ ಪ್ರಶ್ನೆಗೆ ನೇರವಾದ ಉತ್ತರ ಬರಲಿಲ್ಲ. ಸ್ವಾಮಿ, ಬೋತ ಮಾಡಿದುದರಿಂದ ಈ ಕಾರ್ಖಾನೆ ನಷ್ಟವನ್ನು ಅನುಭವಿಸುತ್ತಿದೆ. ಇದು 11 ಸಾವಿರ ವಿದ್ಯುತ್-ಕಾರ್ಮಿಕರ